ಎಚ್ಚರಿಕೆ ನೀಡಿದ್ದ. ಗಿರೀಶ್ ಪತ್ರಿಕೆಯಲ್ಲಿ ಆ ವಿಷಯ ಪ್ರಕಟವಾಗುತ್ತಲೇ ತನ್ನ ವೆಲ್‌ನೆಸ್ ಸೆಂಟರನ್ನು ಮುಚ್ಚಿ ಪರಾರಿಯಾಗಿದ್ದ.

ಪದ್ಮಾಳಿಗೆ ಹರೀಶ್‌ನ ಮೇಲೆ ಕನಿಕರ ಮೂಡಿತು. ಅವನನ್ನು ಒತ್ತಾಯಿಸಿ ಬೆಂಗಳೂರಿಗೆ ಅಗತ್ಯವಾಗಿ ಬರಲೇಬೇಕೆಂದು ಕೇಳಿಕೊಂಡಳು. ಹರೀಶ್ ಒಪ್ಪಿಕೊಳ್ಳಲಿಲ್ಲ. ಪದ್ಮಾ ಅವನನ್ನು ಬೇರೊಂದು ರೀತಿಯಲ್ಲಿ ಬೆದರಿಸಬೇಕಾಯಿತು. ಅವನು ಬೆಂಗಳೂರಿಗೆ ಬರದಿದ್ದರೆ ಅವನ ಮೇಲೆಯೇ ಕೇಸ್ ಹಾಕುವುದೆಂದು ತಿಳಿಸಿದ ಮೇಲೆ ಹರೀಶ್ ಹೆದರಲೇಬೇಕಾಯಿತು. ತಕ್ಷಣವೇ ಬೆಂಗಳೂರಿಗೆ ಹೊರಟ. ಪದ್ಮಾ ಮಾಮೂಲಿಯಾಗಿಯೇ ಇದ್ದಳು. ಮುಖದಲ್ಲಿ ಇನ್ನೂ ಬದಲಾಗದ ಆತ್ಮವಿಶ್ವಾಸವಿತ್ತು. ಆತ್ಮೀಯತೆಯಿಂದಲೇ ಬರಮಾಡಿಕೊಂಡಳು. ಅವನಿಗಾಗಿಯೇ ಕೂರ್ಗ್‌ನ ಸ್ಪೆಷಲ್ ಕಾಫಿಯನ್ನು ಮಾಡಿಕೊಟ್ಟಳು. ಸುಖ ಕಷ್ಟಗಳು ವಿನಿಮಯವಾದ ಮೇಲೆ ಅವನೇಕೆ ತನ್ನ ಮೇಲೆ ಕನಿಕರ ತೋರಿಸಿ ತನ್ನ ಹಣವನ್ನು ನೀಡಿದನೆಂದು ಪ್ರಶ್ನಿಸಿದಳು. ಹರೀಶ್ ನಿರುತ್ತರನಾದ. ಅವಳು ಒಳಗೆ ಹೋಗಿ ಅವನು ಕೊಟ್ಟಿದ್ದ ಹಣದ ಕಂತೆಯನ್ನು ಹಾಗೆ ತಂದು ಅವನಿಗೆ ನೀಡಿದಳು.

'ಇಂತಹ ನಿಮ್ಮ ಔದಾರ್ಯ, ದಯೆ ನನಗೆ ಬೇಡ. ನಾನು ಈಗಾಗಲೇ ಕಂಪನಿಯ ಮೇಲೆ ದಾವೆ ಹೂಡಿದ್ದೇನೆ. ನನ್ನ ಗೆಳತಿ ಲಾಯರ್ ಮೀರಾಳನ್ನು ಈಗಾಗಲೇ ಭೇಟಿಯಾಗಿ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಕೊಟ್ಟಿದ್ದೇನೆ. ನನ್ನವರಿಗೆ ಕಿಡ್ನಿ ಫೈಲ್ ಆಗುವುದಕ್ಕೆ ಅವರು ತೆಗೆದುಕೊಳ್ಳುತ್ತಿದ್ದ ಆ ಕಂಪನಿಯ ಸಪ್ಲಿಮೆಂಟ್ ಪ್ರಾಡಕ್ಟೇ ಕಾರಣ ಅನ್ನುವುದು ದೃಢಪಟ್ಟಿದೆ. ಡಾಕ್ಟರ್ ನೀಡಿರುವ ಸರ್ಟಿಫಿಕೇಟ್ ನನ್ನ ಬಳಿ ಇದೆ. ಸದ್ಯ ಅದೊಂದೇ ದಾಖಲೆ ಸಾಕು. ನನ್ನ ಮೇಲೆ ಕನಿಕರದಿಂದ ನೀವೇನೂ ನನಗೆ ಮಾಡುವುದು ಬೇಡ. ಸಾಧ್ಯವಿದ್ದರೆ ನನ್ನ ಕಾನೂನು ಹೋರಾಟದಲ್ಲಿ ಕೈ ಜೋಡಿಸಿ' ಎಂದು ಖಡಕ್ಕಾಗಿ ತಿಳಿಸಿದಳು.

ತನ್ನವರನ್ನು ಕಳೆದುಕೊಂಡ ಜೀವ ಆಕೆ ಎನ್ನುವ ಕನಿಕರ ಅವಳ ಮೇಲೆ ಹರೀಶ್‌ನಿಗೆ. ಅನಿವಾರ್ಯತೆಯಿಂದ ಆಗಲೆಂದು ಅಸಹಾಯಕತೆಯಿಂದ ಒಪ್ಪಿಕೊಂಡ. ಅವನ ಹತ್ತಿರದ ಸಂಬಂಧಿ ಕೂಡ ಆ ಸಪ್ಲಿಮೆಂಟ್‌ನ ಅತಿಯಾದ ಸೇವನೆಯಿಂದಲೇ ಲಿವರ್ ಡ್ಯಾಮೇಜ್ ಆಗಿ ಸತ್ತಿರುವ ವಿಷಯ ತಿಳಿದಿತ್ತು. ಹಾಗಾಗಿ ಅಂತಹ ಅಪಾಯದ ಪ್ರಾಡಕ್ಟ್ ಅನ್ನು ಜನರಿಗೆ ಮಾರಾಟ ಮಾಡಿ ಮೋಸ ಮಾಡುವುದೇಕೆ? ಎನ್ನುವ ಜಿಜ್ಞಾಸೆಯಿಂದ ಅದಕ್ಕೆ ರಿಸೈನ್ ಮಾಡಿ ಉಪನ್ಯಾಸಕನಾಗಿ ಸೇರಿಕೊಂಡಿದ್ದ. ಸದ್ಯ ಪದ್ಮಾಳ ಜೊತೆಗೆ ಕಾನೂನು ಹೋರಾಟದಲ್ಲಿ ಭಾಗಿಯಾದ ಹರೀಶ್. ಪದ್ಮಾಳಿಗೆ ನೂರಾನೆ ಬಲ ಬಂತು. ಜೊತೆಗೆ ಗೆಳತಿ ಲಾಯರ್ ಮೀರಾಳ ತ್ವರಿತ ಕಾರ್ಯದಿಂದ ಹೋರಾಟ ಸಫಲತೆಯ ಕಡೆಗೆ ಸಾಗಿತ್ತು. ರಜೆ ಸಿಕ್ಕಾಗಲೆಲ್ಲ ಪದ್ಮಾಳ ಅಪಾರ್ಟ್‌ಮೆಂಟ್‌ಗೆ ಬರುತ್ತಿದ್ದ ಹರೀಶ್. ಆಕೆ ಒಂದು ದಿವಸವೂ ತನ್ನ ವೈಯಕ್ತಿಕ ವಿಷಯವನ್ನಾಗಲಿ ತನ್ನ ಮಗಳ ವಿಷಯವನ್ನಾಗಲಿ ಎತ್ತಿರಲಿಲ್ಲ. ಅದೇನೋ ಒಮ್ಮೆ ಮಗಳು ಸದ್ಯ ಎಂಜಿನಿಯರಿಂಗ್ ಕಲಿಯುತ್ತಿರುವಳೆನ್ನುವ ವಿಷಯ ಹೇಳಿದ್ದು ಬಿಟ್ಟರೆ ಈ ನಾಲ್ಕೈದು ವರ್ಷಗಳಲ್ಲಿ ಮತ್ತೇನೂ ಹೇಳಿರಲಿಲ್ಲ. ಹರೀಶ್ ಕೂಡ ಆ ವಿಷಯವನ್ನು ಕೇಳಿರಲಿಲ್ಲ. ಅವರ ಆತ್ಮೀಯತೆ ಹೀಗೆಯೇ ಮುಂದುವರೆದು ತೀರಾ ಪರಿಚಿತರಂತೆ ಆದರು.




***

ಪದ್ಮಾ ನ್ಯೂ ಇಯರ್‌ಗೆ ಕರೆದಾಗ ಹರೀಶ್ ಕೂಡ ರಜೆ ಹಾಕಿ ಬಂದನಾದರೂ ಅವಳು ಅದೇನೋ ಸರ್‌ಪ್ರೈಸ್ ನೀಡುವೆನೆಂದು ಹೇಳಿದ್ದು ಕೇವಲ ತನ್ನನ್ನು ಬರುವಂತೆ ಮಾಡಲಷ್ಟೇ ಎಂದಾಗ ಅವನಿಗೆ ನಿರಾಶೆಯಾದರೂ ತನ್ನ ಕೆಲವೊಂದು ವೈಯಕ್ತಿಕ ಕೆಲಸಗಳನ್ನು ಮುಗಿಸಿಕೊಂಡು ಹೋಗುವ ನೆಪದಿಂದ ಸಂತೃಪ್ತನಾಗಿದ್ದ. ಹರೀಶ್ ಸಣ್ಣ ಸುತ್ತಾಟ ಮುಗಿಸಿ ಆಕೆಯ ಅಪಾರ್ಟ್‌ಮೆಂಟ್‌ಗೆ ಬಂದಾಗ ಅವನಿಗೆ ಸರ್‌ಪ್ರೈಸ್ ಕಾದಿತ್ತು. ಮನೆಯ ಬಾಗಿಲು ತೆರೆದವಳು ಒಬ್ಬ ಹದಿಹರೆಯದ ಯುವತಿ. ಅವನು ಅರೆಕ್ಷಣ ಹಿಂಜರಿದ. ಆಕೆ ಯಾರು ಬೇಕೆಂದು ಪ್ರಶ್ನಿಸುತ್ತಿರುವಾಗಲೇ ಪದ್ಮಾ ಹೊರಗೆ ಬಂದಳು. ಯುವತಿಯನ್ನು ಪಕ್ಕಕ್ಕೆ ನಿಲ್ಲಿಸಿ, 'ಬಾ' ಎಂದು ಹರೀಶ್‌ನನ್ನು ಒಳಗೆ ಕರೆದಳು. ಯುವತಿ ತನ್ನ ಕೆಲಸವಾಯಿತೆನ್ನುವಂತೆ ಅಲ್ಲಿಂದ ನಿರ್ಗಮಿಸಿದಳು.

'ನಾನು ನಿನಗೊಂದು ಸರ್‌ಪ್ರೈಸ್ ತೋರಿಸ್ತೀನಿ ಅಂದಿದ್ನಲ್ಲಾ, ಅದೇ ಇವಳು'. ಹರೀಶ್ ಒಮ್ಮೆ ತಬ್ಬಿಬ್ಬಾದ. ಯಾರೀ ಹುಡುಗಿ? ಪದ್ಮಾಳ ಮಗಳಿರಬಹುದೆಂದುಕೊಂಡ. ಅವನ ಊಹೆ ಸುಳ್ಳಾಗಲಿಲ್ಲ.

'ನಿಂಗೆ ಗೊತ್ತಾಗಿಲ್ವಾ?' ಅವನು ಇಲ್ಲವೆನ್ನುವಂತೆ ತಲೆಯಲುಗಿಸಿ ಆ ಯುವತಿ ಹೋದತ್ತಲೇ ನೋಡುತ್ತಾ ನಿಂತ.

'ಅವ್ಳು ನನ್ನ ಮಗಳು ಇಶಾನಿ. ಎಂಜಿನಿಯರಿಂಗ್ ಮುಗಿಸಿ ಆಯ್ತು' ಎಂದಳು ಮುಗುಳ್ನಗುತ್ತ. ಹರೀಶ್‌ಗೆ ಆ ಯುವತಿಯನ್ನು ಮತ್ತೊಮ್ಮೆ ನೋಡಬೇಕೆನ್ನುವಂತಾಯಿತು. ಪದ್ಮಾಳ ಎದುರಿಗೆ ಅದನ್ನು ತೋರಿಸಿಕೊಳ್ಳದೆ ತೆಪ್ಪಗೆ ಕುಳಿತ. ಪದ್ಮಾಳ ಸೂಕ್ಷ್ಮ ಕಣ್ಣುಗಳು ಅದನ್ನು ಅಳೆದವು. ಸ್ವಲ್ಪ ಹೊತ್ತಿಗೆ ಪದ್ಮಾ ಅವನನ್ನು ಊಟಕ್ಕೆ ಕರೆದಳು. ಎಲ್ಲವೂ ಮೇಜಿನ ಮೇಲೆ ಸಿದ್ಧವಾಗಿದ್ದವು. ಅವಳು ಇಶಾನಿಯನ್ನೂ ಕರೆದಳು. ಅವಳಿಗೆ ಹರೀಶ್‌ನನ್ನು ಪರಿಚಯಿಸಿದಳು. ಒಮ್ಮೆ ಇಶಾನಿಯ ಮುಖ ಗಂಟಿಕ್ಕಿಕೊಂಡರೂ ತಕ್ಷಣವೇ ಮುಖದಲ್ಲಿ ಮುಗುಳ್ನಗು ಬೀರಿ 'ಹಲೋ' ಎಂದಳು. ಹರೀಶ್ ಅವಳ ಸೌಂದರ್ಯಕ್ಕೆ ಮಾರುಹೋದಂತೆ ಕುಳಿತಿದ್ದ. ಕೊನೆಗೆ ಪದ್ಮಾಳೇ ಅವನನ್ನು ಉಣ್ಣುವಂತೆ ಹೇಳಬೇಕಾಯಿತು.

'ಅವಳು ನಾಳೆ ಯುಕೆಗೆ ಹೋಗ್ತಿದ್ದಾಳೆ', ತಕ್ಷಣವೇ ಆಕೆ ಹೇಳುವಾಗ ಅವನಿಗೇಕೋ ನಿರಾಶೆಯಾಯಿತು. ಪದ್ಮಾ ಅದನ್ನು ಸೂಕ್ಷ್ಮವಾಗಿ ಗಮನಿಸಿದಳು. ಅಷ್ಟರಲ್ಲಿಯೇ ಇಶಾನಿ ಅವಳನ್ನು ಒಳಗೆ ಕರೆದಳು. ಅವರ ನಡುವೆ ಏನು ಮಾತುಕತೆಯಾಯಿತೋ ಪದ್ಮಾಳ ಮೈಯೆಲ್ಲಾ ಉರಿಯತೊಡಗಿತು. ಅವಳು ಹೊರಗೆ ಬಂದಾಗ ಇಶಾನಿಯೂ ಹೊರಗೆ ಬಂದವಳೇ ಗೆಳತಿಯ ಮನೆಗೆ ಹೋಗಿ ಬರುವುದಾಗಿ ಹೇಳಿ ಆಟೋ ಹಿಡಿದು ಹೊರಟಳು. ಪದ್ಮಾ ಹರೀಶ್‌ನ ಎದುರಿಗೆ ಚೇರ್ ಎಳೆದು ಕುಳಿತಳು. ಹರೀಶ್‌ನ ಮನಸ್ಥಿತಿಯನ್ನು ಚೆನ್ನಾಗಿ ಅರಿತಿದ್ದ ಪದ್ಮಾ ಯಾವುದೇ ಮುಲಾಜಿಲ್ಲದೆ, 'ಹರಿ, ಇಷ್ಟು ದಿನ ನೀನು ಏನೋ ಅಂದುಕೊಂಡಿದ್ದೆ. ಆದರೆ ಇವತ್ತು ಈ ಹೊಸ ವರ್ಷದ ಆಚರಣೆಯ ಸಂಭ್ರಮದಲ್ಲಿ ನೀನು ಏನು ಅನ್ನುವುದು ಸ್ಪಷ್ಟವಾಗಿದೆ. ನಾನು ನಿನಗೆ ಏನು ಹೇಳಲು ಹೊರಟಿರುವೆನೆಂದು ನಿನಗೆ ತಿಳಿದಿರಬೇಕು. ಅದನ್ನು ನೀನು ನನ್ನ ಬಾಯಿಯಿಂದಲೇ ಕೇಳಬೇಕೆಂದಾಗುವುದು ಬೇಡ. ದಯವಿಟ್ಟು ನ್ಯೂ ಇಯರ್ ಪಾರ್ಟಿ ಮುಗಿಯುತ್ತಲೇ ಇಲ್ಲಿಂದ ಹೊರಟು ಹೋಗು. ನನಗೆ ಯಾವ ಗಂಡಸಿನ ದಿಕ್ಕಿಲ್ಲವೆಂದು ನಿನ್ನ ಜೊತೆಗೆ ಆತ್ಮೀಯತೆಯಿಂದ ಇದ್ದದ್ದಲ್ಲ ನಾನು. ಹೆಣ್ಣಿನ ಅಸಹಾಯಕತೆಯನ್ನು ಅಪಾರ್ಥ ಮಾಡಿಕೊಳ್ಳುವವರ ಸಾಲಿಗೆ ನೀನೂ ಸೇರಿಲ್ಲ ಅನ್ನೋ ಒಳ್ಳೆಯ ಭಾವನೆ ನನಗಿತ್ತು. ಇನ್ನು ಮುಂದೆ...' ಅವಳ ಮಾತನ್ನು ಕೇಳಿಸಿಕೊಳ್ಳುವಷ್ಟು ಹೊತ್ತು ಹರೀಶ್ ಅಲ್ಲಿರಲಿಲ್ಲ. ತನ್ನ ತಪ್ಪಿನ ಅರಿವಾದವನಂತೆ ತನ್ನ ಬ್ಯಾಗ್ ಹಿಡಿದುಕೊಂಡು ಕೆಳಗಿಳಿದು ಬಂದವನೇ ಕ್ಯಾಬ್ ಹಿಡಿದು ಮೆಜೆಸ್ಟಿಕ್‌ನತ್ತ ಹೊರಟ.

ಪ್ರತಿಕ್ರಿಯಿಸಿ: **feedback@sudha.co.in**